ಶ್ರೀ ಡಿ. ದೇವರಾಜ್ ಅರಸ್]

ಸರಕಾರದ ಕಡೆಯಿಂದ ಸೂಚನೆಗಳನ್ನು ಕೊಟ್ಟು ಈ ಕೆಲಸಗಳನ್ನು ಮಾಡುತ್ತಿದ್ದಾರೆ, ಅವರಿಗೆ ಇದಕ್ಕಾಗಿ ನೀವು ಸತ್ಯಾಗ್ರಹ ಇಲ್ಲವೇ ಉಪವಾಸ ಮಾಡುವುದು ವಿಹಿತವಲ್ಲ ಎಂದು ತಾವೆಲ್ಲರೂ ಹೇಳಿ ಅವರನ್ನು ಒಪ್ಪಿಸಬಹುದು.

Arrest and Release of a Member—Announcement

MADAM SPEAKER:—I have received a communication from the Superintendent of Police, Mysore City that Sri Vatal Nagaraj, a member of the House, was arrested at 11.00 a.m. today *i.e.* 11th December under Section 151 of Cr.P.C. and that he will be released in due course when the situation returns to normalcy.

REQUESTING SRI M. K. SURPUR TO BREAK HIS FAST.

2-30 P.M.

ಶ್ರೀ ಬಾಪೂಗೌಡ ರಾಯಪ್ಪ.— ಈ ಸಭೆಯ ಒಬ್ಬ ಸದಸ್ಯರು ಉಪವಾಸ ಕೈಕೊಂಡಿದ್ದಾರೆ. ಅವರ ಉಪವಾಸದಿಂದ ಮುಂದೆ ಆಗತಕ್ಕ ಗಂಡಾಂತರವನ್ನು ತಪ್ಪಿಸಬೇಕು. ಒಂದು ವೇಳೆ ಅಂಥ ಗಂಡಾಂತರ ಉಂಟಾದರೆ ಈ ಸದನಕ್ಕೆ ಗೌರವ ಬರುವುದಿಲ್ಲ. ಅವರು ಎರಡು ದಿವಸಗಳಿಂದ ಉಪವಾಸ ಮಾಡುತ್ತಿದ್ದಾರೆ. ಅವರು ಸೀರಿಯಸ್ ಕಂಡೀಷನ್‌ನಲ್ಲಿದ್ದಾರೆಂದು ಗೊತ್ತಾಗಿದೆ. ಒಂದು ವೇಳೆ ಅವರು ಸತ್ತರೆ ಈ ಮನೆಗೆ ಅಪವಾದ ಬಂದೀತು. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಸಭೆಯ ಪರವಾಗಿ ಅವರು ಉಪವಾಸವನ್ನು ಕೈಬಿಡುವಂತೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಜಿ. ಪಿ. ನಂಜಯ್ಯನಮಠ .— ಮಾನ್ಯ ಸದಸ್ಯರು ಹೇಳಿದುದನ್ನು ನಾನು ಅನುಮೋದನೆ ಮಾಡುತ್ತೇನೆ.

ಶ್ರೀ ಜಿ. ಎನ್. ಪಾಟೀಲ್.— ನಮ್ಮ ಸಭೆಯ ಸದಸ್ಯರೊಬ್ಬರು ಉಪವಾಸ ಮಾಡುತ್ತಿರುವಾಗ ನಾವು ಸುಮ್ಮನೆ ಕುಳಿತುಕೊಳ್ಳಬೇಕು ಎಂದರೆ ಹಾಗೆ ಮಾಡಲು ಸಾಧ್ಯವಿಲ್ಲ. ನಾವು ಸಭೆಯಲ್ಲಿ ಧರಣಿ ಸತ್ಯಾಗ್ರಹ ಮಾಡಿದಾಗ ಕೊಟ್ಟಂಥ ಆಶ್ವಾಸನೆಯನ್ನು ಇನ್ನೂ ಈಡೇರಿಸಿಲ್ಲ.

ಅಧ್ಯಕ್ಷರು.— ಎಲ್ಲರಿಗೂ ಗೊತ್ತಿರುವ ಹಾಗೆ ಒಬ್ಬ ಮಾನ್ಯ ಸದಸ್ಯರನ್ನು ಆ ಭಾಗಕ್ಕೆ ಕಳುಹಿಸ ಲಾಗಿದೆ.

ಶ್ರೀ ಜಿ. ಎನ್. ಪಾಟೀಲ್.— ಮಾನ್ಯ ಸದಸ್ಯರಲ್ಲಿ ತಮ್ಮ ಮುಖೇನ ನನ್ನದು ಒಂದು ವಿನಂತಿ ಇದೆ. ನಿನ್ನೆ ದಿವಸ ನಾವು ಕೆಲವೊಂದು ಸಂಬಂಧಪಟ್ಟ ಮಂತ್ರಿಗಳನ್ನು ಕರೆತು ಮಾತನಾಡಿ ಒಂದು ವೀಟಿಂಗ್ ಕರೆದು ಪರಿಹಾರವನ್ನು ಕೈಕೊಳ್ಳಬೇಕೆಂದು ಹೇಳಿದ್ದೇವೆ. ಅದರ ಬಗ್ಗೆ ಅವರು ಏನು ಮಾಡುತ್ತಾರೆನ್ನುವುದನ್ನು ದಯಮಾಡಿ ತಿಳಿಸಬೇಕು.

ಅಧ್ಯಕ್ಷರು.— ನಿಮ್ಮ ನಿಮ್ಮಲ್ಲಿ ಚರ್ಚೆಯಾಗಿರಬಹುದಾದ ವಿಚಾರಗಳನ್ನು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ. ನನಗೆ ನೋಟೀಸ್ ಕೊಟ್ಟರೆ ಅದನ್ನು ಸರ್ಕಾರಕ್ಕೆ ಕಳುಹಿಸುತ್ತೇನೆ. ನಾವು ಕೆಲವು ನಿಯಮಗಳ ಪ್ರಕಾರ ಕೆಲಸ ಮಾಡಬೇಕಾಗಿದೆ.

ಶ್ರೀ ಬಾಪೂಗೌಡ ರಾಯಪ್ಪ:— ಶ್ರೀ ಸಂಗಪುರ ಮಲ್ಲಪ್ಪನವರು ಬಹಳ ಸೀರಿಯಸ್ ಆಗಿದ್ದಾರೆ, ಅದರ ಬಗ್ಗೆ ಏನಾದರೂ ಮೊದಲು ಮಾಡಬೇಕು.